# ಟೊಮೆಟೊ ಕಲರ್ ಮತ್ತು ನೆತ್ತರ ಸ್ಮೆಲ್!



ಬೆಂಗಳೂರಿನ ರಂಗಭೂಮಿಯಲ್ಲಿ ತಾಯಿ ಲೋಕೇಶ್ ಹೆಸರು ಛಾಯಾಗ್ರಹಣದ ಕಾರಣಕ್ಕೆ ಪರಿಚಿತ. ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ, ರಂಗಭೂಮಿ ಪ್ರದರ್ಶನಗಳಲ್ಲಿ ಅವರ ಕ್ಯಾಮೆರಾ ಕಣ್ಣು ಮಿಟುಕುತ್ತಲೇ ಇರುತ್ತದೆ. ಛಾಯಾಗ್ರಹಣದ ಜೊತೆಗೆ ಅವರ ಮುಖ್ಯ ಆಸಕ್ತಿ ಇರುವುದು ಸಿನಿಮಾದಲ್ಲಿ. 'ರಾಜಧಾನಿ', 'ಭಾರತ್ ಸ್ಟೋರ್ಸ್', 'ಸಂತೆಯಲ್ಲಿ ನಿಂತ ಕಬೀರ' ಹೀಗೆ ಹಲವು ಸಿನಿಮಾಗಳಲ್ಲಿ ಕೆಲಸ ಮಾಡಿದ್ದಾರೆ. ಅಷ್ಟೇ ಅಲ್ಲ, ಈಗ ಪೂರ್ಣಪ್ರಮಾಣದಲ್ಲಿ ನಿರ್ದೇಶಕರೇ ಆಗಲು ಹೊರಟಿದ್ದಾರೆ.



ಕೋಟಿಗಾನಹಳ್ಳಿ ರಾಮಯ್ಯ

'ದ ಕಲರ್ ಆಫ್ ಟೊಮೆಟೊ' ತಾಯಿ ಲೋಕೇಶ್ ನಿರ್ದೇಶನದ ಮೊದಲ ಸಿನಿಮಾದ ಹೆಸರು. ಟೀಸರ್ ನೋಡಿದರೆ ಟೊಮೆಟೊ ಕಲರ್‌ಗೆ ನೆತ್ತರ ವಾಸನೆಯನ್ನೂ ಸೇರಿಸಿರುವಂತೆ ತೋರುತ್ತದೆ. ರೈತಮುಖಂಡ, ಸಾಹಿತಿ ಕೋಟಿಗಾನಹಳ್ಳಿ ರಾಮಯ್ಯ ಅವರ ಕಥೆ ಈ ಹೆಸರಿನಲ್ಲಿ ಸಿನಿಮಾ ಆಗುತ್ತಿದೆ. ಇತ್ತೀಚೆಗೆ ಚಿತ್ರತಂಡ ಟೈಟಲ್ ಲಾಂಚ್ ಮಾಡಿದೆ.

'ಟೊಮೆಟೊದಲ್ಲಿನ ಸಿಹಿ ಮತ್ತು ಹುಳಿ ಎರಡೂ ಚಿತ್ರದಲ್ಲಿದೆ' ಎಂಬುದು ನಿರ್ದೇಶಕರ ಅಂಬೋಣ.

ಪ್ರತಾಪ್ ನಾರಾಯಣ್ ಈ ಚಿತ್ರದಲ್ಲಿ ನಾಯಕನಾಗಿ ಅಭಿನಯಿಸಿದ್ದಾರೆ. ಅವರನ್ನು ಈ ಚಿತ್ರಕ್ಕೆ ಶಿಫಾರಸ್ಸು



ಪ್ರತಾಪ್ ನಾರಾಯಣ್

ಮಾಡಿರುವುದು ಬಿ. ಸುರೇಶ್. ಸುಚಿತ್ರಾ ಫಿಲ್ಮ್ ಸೊಸೈಟಿಯ ಅಂಗಳದಲ್ಲಿ ಕಥೆ ಕೇಳಿದ ಪ್ರತಾಪ್ ಬೇರೆ ಮಾತೇ ಇಲ್ಲದೆ ಚಿತ್ರದಲ್ಲಿ ನಟಿಸಲು ಒಪ್ಪಿಕೊಂಡರಂತೆ. ಕುಮಾರ್ ಮತ್ತು ಸ್ವಾತಿ ಕುಮಾರ್ ಚಿತ್ರಕ್ಕೆ ಹಣ ಹೂಡಿದ್ದಾರೆ.

'ತಮಿಳು, ಮಲಯಾಳಂ ಭಾಷೆಗಳಲ್ಲಿ ಎಷ್ಟು ಒಳ್ಳೆಯ ಸಿನಿಮಾಗಳು ಬರುತ್ತಿವೆ. ಕನ್ನಡದಲ್ಲಿಯೂ ಈಗ ಹಲವು ನಿರ್ದೇಶಕರು ಅಂಥ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ನಾನೂ ಅವರ ಜೊತೆಗೆ ಕೈ ಸೇರಿಸುವ ಪ್ರಯತ್ನ ಮಾಡುತ್ತಿದ್ದೇನೆ. ಕನ್ನಡದ ಎಲ್ಲ ಪ್ರೇಕ್ಷಕರಿಗೆ ಇಷ್ಟವಾಗುವ ಹಾಗೆ, ಮನರಂಜನೆಯ ಅಂಶಗಳನ್ನೆಲ್ಲ ಇಟ್ಟುಕೊಂಡೇ ಈ ಸಿನಿಮಾ ಮಾಡುತ್ತಿದ್ದೇವೆ. ನನ್ನ ಜೊತೆಗೆ ಪ್ರತಿಭಾವಂತರ ತಂಡವಿದೆ. ಹಾಗಾಗಿ ಖಂಡಿತ ಒಳ್ಳೆಯ ಸಿನಿಮಾ ಮಾಡುತ್ತೇವೆ ಎಂಬ ನಂಬಿಕೆ ಇದೆ' ಎನ್ನುತ್ತಾರೆ ತಾಯಿ ಲೋಕೇಶ್.

ಚಿತ್ರ: ಕೆ.ಎಸ್. ನಾಗೇಶ್‌ಕುಮಾರ್

ತಾಯಿ ಲೋಕೇಶ್

# ಲಂಬಾಣಿ ಹುಡುಗಿ ಶುಭಾ ಪೂಂಜಾ!



ಬಿಗ್‌ಬಾಸ್ ಮನೆಯಲ್ಲಿ ತನ್ನ ತುಂಟಾಟಗಳು ಮತ್ತು ವಿಶಿಷ್ಟ ಚೇಷ್ಟೆಗಳಿಂದಲೇ ಮನರಂಜನೆಯ ಬುಗ್ಗೆಯಾಗಿದ್ದ ಶುಭಾ ಪೂಂಜಾ ಈಗ ಮತ್ತೆ ನಟನೆಯ ಹಾದಿಗೆ ಮರಳಿದ್ದಾರೆ.

'ಅಂಬುಜ' ಸಿನಿಮಾದಲ್ಲಿ ಅವರು ನಟಿಸುತ್ತಿದ್ದು, ಲಂಬಾಣಿ ಹುಡುಗಿಯಾಗಿ ಮಿಂಚುವ ಸಿದ್ಧತೆ ನಡೆಸಿದ್ದಾರೆ. ಲಂಬಾಣಿ ಸಾಂಪ್ರದಾಯಿಕ ಉಡುಗೆ ತೊಟ್ಟ ಪೋಸ್ಟರ್ ಅನ್ನೂ ಚಿತ್ರತಂಡ ಇತ್ತೀಚೆಗೆ ಜಾಹೀರುಮಾಡಿದೆ. ಲಂಬಾಣಿ ಉಡುಗೆ ತೊಟ್ಟು, ಕೈಯಲ್ಲಿ ಚಾಕು ಹಿಡಿದು ಕೂತಿರುವ ಶುಭಾ ಚಿತ್ರ ಈ ಸಿನಿಮಾದ ಬಗ್ಗೆ ಕುತೂಹಲ ಹುಟ್ಟಿಸುವಂತಿದೆ. ಆ ಉಡುಗೆಯ ತೂಕವೇ ಇಪ್ಪತ್ತು ಕೆ.ಜಿ. ಇದೆಯಂತೆ.

ಶ್ರೀನಿ ಹನುಮಂತರಾಜು ನಿರ್ದೇಶನದ ಈ ಚಿತ್ರವು ಸೈಕಾಲಾಜಿಕಲ್ ಹಾರರ್ ಥ್ರಿಲ್ಲರ್ ಕಥೆಯನ್ನು ಹೊಂದಿದೆಯಂತೆ. ಶುಭಾ ಬರೀ ಲಂಬಾಣಿ ಹುಡುಗಿಯಷ್ಟೇ ಅಲ್ಲ, ಪತ್ರಕರ್ತೆಯಾಗಿಯೂ ಕಾಣಿಸಿಕೊಂಡಿದ್ದಾರೆ. ಎರಡು ವಿರುದ್ಧ ದಿಕ್ಕಿನ ಪಾತ್ರಗಳನ್ನು ಅವರು ನಿರ್ವಹಿಸಿದ್ದಾರೆ.

ರಾಯಚೂರಿನಲ್ಲಿ ನಡೆದ ನಿಜಘಟನೆಯೊಂದನ್ನು ಆಧರಿಸಿ ಈ ಸಿನಿಮಾವನ್ನು ರೂಪಿಸಲಾಗುತ್ತಿದೆ. ಚಿತ್ರಕ್ಕೆ ಕಾಶಿನಾಥ ಮಡಿವಾಳರ್ ಹಣ ಹೂಡಿದ್ದಾರೆ. ಗೋವಿಂದೇಗೌಡ, ಪ್ರಿಯಾಂಕ ಕಾಮತ್ ಇತರರು ತಾರಾಗಣದಲ್ಲಿದ್ದಾರೆ.